

# ಹೃದಯ ಶಸ್ತ್ರಚಿಕಿತ್ಸೆಗೆ ಹೆದರಿಕೆ ಏಕೆ?
# ಕನಿಷ್ಠ ಗಾಯದ ಶಸ್ತ್ರಚಿಕಿತ್ಸೆ ಇಲ್ಲಿದೆ

ರಮೇಶ್ (ಹೆಸರು ಬದಲಾಯಿಸಲಾಗಿದೆ) 45 ವರ್ಷದವರಾಗಿದ್ದು ಹಿರಿಯ ಕಾರ್ಯನಿರ್ವಾಹಕರಾಗಿದ್ದಾರೆ. ಹೆಚ್ಚಿನ ಸಮಯ ಪ್ರವಾಸದಲ್ಲಿರುತ್ತಾರೆ. ಸದಾ ಒತ್ತಡದಲ್ಲಿರುವ ಅವರಿಗೆ ಧೂಮಪಾನ ಅಭ್ಯಾಸವಾಗಿರುತ್ತದೆ. ಹೃದಯಾಘಾತದಿಂದ ಆಸ್ಪತ್ರೆಗೆ ಸೇರಿದಾಗ ಅವರ ಜಗತ್ತೇ ನಿಂತುಹೋದಂತಾಗಿತ್ತು. ತುರ್ತು ಎಂಜಿಯೋಗ್ರಾಮ್ ಪರೀಕ್ಷೆಗೆ ಒಳಗಾದ ಅವರಿಗೆ ಬೈಪಾಸ್ ಶಸ್ತ್ರಚಿಕಿತ್ಸೆ ಸಲಹೆ ನೀಡಲಾಯಿತು.

ಸಾಂಪ್ರದಾಯಿಕ ಬೈಪಾಸ್ ಶಸ್ತ್ರಚಿಕಿತ್ಸೆಯ ಫಲಿತಾಂಶಗಳು ಅದ್ಭುತವಾಗಿದ್ದರೂ ಅವರು ಆತಂಕಕ್ಕೆ ಒಳಗಾಗಿದ್ದರು. ವಿರೂಪಗೊಳಿಸುವ ಶಸ್ತ್ರಚಿಕಿತ್ಸೆ, ನೋವು, ನಿಧಾನಗತಿಯಲ್ಲಿ ಚೇತರಿಸಿಕೊಳ್ಳುವುದು, ಗಾಯದ ಗುರುತುಗಳು, ಜೀವದ ಅಪಾಯ ಹಾಗೂ ಸಂಪಾದನೆಯಲ್ಲಿ ನಷ್ಟ ಮುಂತಾದ ಭಯಗಳು ಅವರನ್ನು ತೀವ್ರ ಕಳವಳಕ್ಕೀಡು ಮಾಡಿದ್ದವು.

ಅವರ ತಂದೆಯ ಹಿರಿಯ ಸಹೋದ್ಯೋಗಿಯೊಬ್ಬರು ಬೆಂಗಳೂರಿನ ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್ಸ್‌ನಲ್ಲಿ ನಡೆಸುವ ಕನಿಷ್ಠ ಗಾಯದ (ಕೀಹೋಲ್ ಶಸ್ತ್ರಚಿಕಿತ್ಸೆಯಂತಹ) ಶಸ್ತ್ರಚಿಕಿತ್ಸೆಯ ಕ್ರಾಂತಿಕಾರಿ ಕ್ರಮದ ಬಗ್ಗೆ ಕೇಳಿದ್ದರು. ಅವರು ಈ ಶಸ್ತ್ರಚಿಕಿತ್ಸೆ ಕುರಿತು ಸಲಹೆ ನೀಡಿ ಅದನ್ನು ಪ್ರಯತ್ನಿಸಲು ಸೂಚಿಸಿದ್ದರು. ಈ ಮೇಲೆ ಹೇಳಿದ ಅನೇಕ ದುಷ್ಪರಿಣಾಮಗಳಿಲ್ಲದೆ ಬೈಪಾಸ್ ಶಸ್ತ್ರಚಿಕಿತ್ಸೆಯ ಸಾಧ್ಯತೆ ಬಗ್ಗೆ ರಮೇಶ್ ಅವರು ಹರ್ಷಗೊಂಡಿದ್ದರು.

ಅವರು ಹಲವಾರು ಆತಂಕದ ಪ್ರಶ್ನೆಗಳೊಂದಿಗೆ ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್ಸ್‌ನಲ್ಲಿನ ಪರಿಣಿತರನ್ನು ಭೇಟಿಯಾಗಿದ್ದರು.

### ಎಂಐಸಿಎಸ್ ಎಂದರೇನು?

ಮಿನಿಮಲಿ ಇನ್ವೇಸಿವ್ ಕಾರ್ಡಿಯಾಕ್ ಸರ್ಜರಿ ಅಂದರೆ ಹೃದಯ ಶಸ್ತ್ರಚಿಕಿತ್ಸೆಯನ್ನು ಸಣ್ಣ (ಕನಿಷ್ಠ)ಗಾಯದ ಮೂಲಕ ಯಾವುದೇ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳಲಾಗದೇ ನಡೆಸಲಾಗುತ್ತದೆ.

### ಅದನ್ನು ಯಾವ ರೀತಿ ಮಾಡುತ್ತಾರೆ?

ಎರಡು ಇಂಚು ಅಗಲದ ಗಾಯವನ್ನು ಮಹಿಳೆಯರಲ್ಲಿ ಸ್ತನದ ತಳಭಾಗದಲ್ಲಿ ಹಾಗೂ ಪುರುಷರಲ್ಲಿ ಎದೆತೊಟ್ಟಿನ ತಳಭಾಗದಲ್ಲಿ ಮಾಡಲಾಗುತ್ತದೆ. ಎದೆಗೂಡಿನ ಮೂಳೆಗಳ ನಡುವಿನ (ಯಾವ ಮೂಳೆಯನ್ನು ಕತ್ತರಿಸದೆ) ಜಾಗವನ್ನು ನಿಧಾನವಾಗಿ ಹಿಗ್ಗಿಸಲಾಗುತ್ತದೆ. ದೇಹದ ಇತರೆ ಭಾಗಗಳಿಂದ ರಕ್ತನಾಳಗಳನ್ನು ತೆಗೆದುಕೊಂಡು



**ನಾಲ್ಕನೇ ದಿನ ನನ್ನ ವೈದ್ಯರು ಮಾತನಾಡಿ, ರಮೇಶ್ ನೀವು ಇಂದು ಮನೆಗೆ ಹೋಗಬಹುದು ಎಂದಾಗ ನಾನು ಬಹಳ ಹರ್ಷಗೊಂಡಿದ್ದೆ. ಇವೆಲ್ಲವೂ ಇಷ್ಟು ಬೇಗ ಮುಗಿದುಹೋಗಬಹುದೆಂದು ನಾನು ನಂಬಲು ಸಾಧ್ಯವಾಗಿರಲಿಲ್ಲ. ನನ್ನ ಉಸಿರಾಟ ಸುಲಭವಾಗಿತ್ತು. ಯಾವುದೇ ಅನಾನುಕೂಲ ಇರಲಿಲ್ಲ. ನಾನು ಮತ್ತೆ ಕುಟುಂಬದೊಂದಿಗೆ ಹಿಂತಿರುಗಿದೆ.**

ಅಂತರ್ದರ್ಶಕಗಳನ್ನು(ಎಂಡೋಸ್ಕೋಪ್) ಬಳಸಿ ನೂತನ ಮಾರ್ಗವನ್ನು ಸೃಷ್ಟಿಸಲಾಗುತ್ತದೆ. ದೇಹದ ಭಾಗಗಳಿಗೆ ಹೃದಯ ರಕ್ತವನ್ನು ಕಳುಹಿಸುತ್ತಿರುವಾಗಲೇ, ಬೈಪಾಸ್ ಶಸ್ತ್ರಚಿಕಿತ್ಸೆ ಅಗತ್ಯವಿರುವ ಸ್ಥಳವನ್ನು 'ಆಕ್ಟೋಪಸ್' ಅಥವ 'ಸ್ಟಾರ್‌ಫಿಶ್' ಎಂದು ಕರೆಯುವ ವಿಶೇಷ ಸ್ಟೆಬಲೈಸರ್‌ಗಳನ್ನು ಬಳಸಿ ಸ್ಥಿರಗೊಳಿಸಲಾಗುತ್ತದೆ. 1.5 ಮಿಲಿಮೀಟರ್ ವ್ಯಾಸದ ರಕ್ತನಾಳಗಳನ್ನು ಸೂಕ್ಷ್ಮ ರೀತಿಯಲ್ಲಿ ಅಳವಡಿಸಲು ಕೂದಲ ಗಾತ್ರದ ವಿಶೇಷ ದಾರಗಳಿಂದ ಹೊಲಿಗೆ ಹಾಕಲಾಗುತ್ತದೆ. ನಂತರ ಚರ್ಮವನ್ನು ಸರಳವಾಗಿ ಮುಚ್ಚಲಾಗುತ್ತದೆ.

### ಇದರ ಲಾಭಗಳು ಯಾವುವು?

ನೋವು ಕನಿಷ್ಠವಾಗುತ್ತದೆ. ಎದೆಯ ಮೂಳೆಯನ್ನು ಗರಗಸದಲ್ಲಿ ಕತ್ತರಿಸುವುದಿಲ್ಲ. ಉಸಿರಾಟ ಸುಲಭವಾಗುತ್ತದೆ ಹಾಗೂ ಶ್ವಾಸಕೋಶದ ತೊಂದರೆಗಳು ಮತ್ತು ಸೋಂಕುಗಳು ಬಹಳ ಕಡಿಮೆಯಾಗುತ್ತದೆ. ರಕ್ತನಷ್ಟ ಬಹಳಷ್ಟು ಕಡಿಮೆ. ಗಾಯ ಅತ್ಯಂತ ಚಿಕ್ಕದಾಗಿದ್ದು ಮಹಿಳೆಯರಲ್ಲಿ ಸ್ತನದ ತಳಭಾಗದಲ್ಲಿ ಹಾಗೂ ಪುರುಷರಲ್ಲಿ ಎದೆಯ ತೊಟ್ಟಿನ ಕೆಳಗೆ ಅಡಕವಾಗಿರುತ್ತದೆ. ಇದರಿಂದಾಗಿ ಸೌಂದರ್ಯದ ದೃಷ್ಟಿಯಿಂದಲೂ ಈ ಶಸ್ತ್ರಚಿಕಿತ್ಸೆ ರೋಗಿಗಳಿಗೆ ಉತ್ತಮ ಆಯ್ಕೆಯಾಗಿದ್ದು ಶೀಘ್ರವಾಗಿ ಚೇತರಿಸಿಕೊಂಡು ಮನೆಗೆ ಹೋಗಬಹುದಾಗಿದೆ.

### ಈ ತಂತ್ರ ಬಳಸಿ ಯಾವ ಇತರೆ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗುತ್ತಿದೆ?

ಹಲವಾರು ರಕ್ತನಾಳಗಳ ಬೈಪಾಸ್ ಶಸ್ತ್ರಚಿಕಿತ್ಸೆಗಳು, ಬಹುತೇಕ ಕವಾಟದ ತೊಂದರೆಗಳು ಮತ್ತು ಹೃದಯದಲ್ಲಿ ರಂಧ್ರ ಇರುವಲ್ಲಿ ಈ ಕ್ರಮ ಬಳಸಿ ಶಸ್ತ್ರಚಿಕಿತ್ಸೆ ನಡೆಸಬಹುದಾಗಿದೆ. ಕೂಲಂಕುಷವಾಗಿ ಮೌಲ್ಯೀಕರಣ ನಡೆಸಿದ ನಂತರ ಈ ಕ್ರಮ ಸೂಕ್ತವಾಗುತ್ತದೆಯೇ ಎಂಬುದನ್ನು ಕುರಿತು ನಿರ್ಣಯ ಕೈಗೊಳ್ಳಲಾಗುತ್ತದೆ.

### ಭಾರತದಲ್ಲಿ ಈ ಕ್ರಮವನ್ನು ಎಲ್ಲಿ ನಡೆಸಲಾಗುತ್ತದೆ?

ಎಂಐಸಿಎಸ್ ಕೆಲವೇ ಕೇಂದ್ರಗಳಲ್ಲಿ ನಡೆಸಲು ಸಾಧ್ಯ. ಏಕೆಂದರೆ ಅದಕ್ಕೆ ಅತ್ಯಂತ ಉನ್ನತವಾದ ಅನುಭವಿ ಹೃದಯ ಶಸ್ತ್ರಚಿಕಿತ್ಸಾ ತಂಡದ ಅಗತ್ಯವಿದ್ದು ಅವರಿಗೆ ಅತ್ಯಂತ ದುಬಾರಿ ಉಪಕರಣಗಳೊಂದಿಗೆ ವಿಶೇಷ ತರಬೇತಿಯ ಅಗತ್ಯವಿರುತ್ತದೆ.

ಬೆಂಗಳೂರಿನ ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್ಸ್ ಈ ರೀತಿಯ ಕೆಲವೇ ಆಸ್ಪತ್ರೆಗಳಲ್ಲಿ ಒಂದಾಗಿದೆ. 12,000ಕ್ಕೂ ಹೆಚ್ಚಿನ ಯಶಸ್ವಿ ಶಸ್ತ್ರಚಿಕಿತ್ಸೆಗಳನ್ನು 13 ವರ್ಷಗಳಿಗೂ ಹೆಚ್ಚಿನ ಸಮಯದಲ್ಲಿ ಈ ತಂಡ ನಡೆಸಿದೆ. ಡಾ|| ಆನಂದ್ ಸುಬ್ರಹ್ಮಣ್ಯಂ, ಡಾ|| ಮನೋಜ್ ಕುಮಾರ್ ಮತ್ತು ಡಾ|| ಭರತ್ ಧುಬೇ ಅವರುಗಳ ಯಶಸ್ಸಿನ ದರ ವಯಸ್ಕರಲ್ಲಿ ಶೇ. 99.3ರಷ್ಟು ಹಾಗೂ ಮಕ್ಕಳ ಶಸ್ತ್ರಚಿಕಿತ್ಸೆಗಳಲ್ಲಿ ಶೇ. 98.5 ರಷ್ಟಿದೆ.

ಇವೆಲ್ಲವುಗಳಿಂದ ಖಾತ್ರಿಯ ತೃಪ್ತಿ ಪಡೆದುಕೊಂಡ ರಮೇಶ್ ಅವರು ಟ್ರಿಪಲ್ ಎಂಐಸಿಎಸ್ ಬೈಪಾಸ್ ಶಸ್ತ್ರಚಿಕಿತ್ಸೆಗೆ ಒಳಗಾಗಿ ನಂತರ ಕೇವಲ ನಾಲ್ಕು ದಿನಗಳಲ್ಲಿ ಮನೆಗೆ ಹಿಂತಿರುಗಿ, ಎರಡೇ ವಾರಗಳಲ್ಲಿ ಪೂರ್ಣ ಕೆಲಸ ಆರಂಭಿಸಿದ್ದಾರೆ. ಆಗಿನಿಂದ ಅವರು ಧೂಮಪಾನ ವರ್ಜಿಸಿದ್ದು ಟೆನ್ನಿಸ್ ಆಟವನ್ನು ಕೈಗೆತ್ತಿಕೊಂಡಿದ್ದಾರೆ.



ಹೆಚ್ಚಿನ ವಿವರಗಳಿಗೆ ಕರೆಮಾಡಿ : **ಬಿಜಿಎಸ್ ಗ್ಲೋಬಲ್ ಹಾಸ್ಪಿಟಲ್ಸ್**, ದೂ : 9620484848